ರಾಜಮಹಾರಾಜರ ಕಣ್ಣಿಗೆ ಬೀಳುತ್ತಿದ್ದರೆಂದರೆ ಅಲೆಮಾರಿಗಳು ದೃಢಕಾಯರಾಗಿದ್ದರೆ ಸೈನ್ಯಕ್ಕೆ ಸೇರಿಸಿಕೊಂಡು ಅವರಂಥವರೇ ಇನ್ನೊಬ್ಬರ ಎದುರು ನಿಂತು ಹೊಡೆದಾಡಿ ಸಾಯುವುದಕ್ಕೆ ಹಚ್ಚುವ ಉಪಾಯಗಳೇ ಹೆಚ್ಚು ತೋರಿಬಂದಿವೆ. ಅಂಥದ್ದೇ ಒಂದು ಉದಾಹರಣೆಯನ್ನು ಕಾಲು ದಾರಿಯ ಕಥನಗಳು ಕೃತಿಯಲ್ಲಿ ಕಾಣಿಸಿದ್ದೇನೆ. ಅದು ವಿಜಯನಗರದ ಅರಸನೊಬ್ಬನು ಅರಣ್ಯದಲ್ಲಿ ದನಕರು ಕಾಯುತ್ತಿದ್ದ ಬುಡಕಟ್ಟು ಸಮೂಹವನ್ನು ಸೈನ್ಯಕ್ಕೆ ಹೇಗಾದರೂ ಮಾಡಿ ಸೇರಿಸಿಕೊಳ್ಳುವ ಉಪಾಯದ ಸಂಗತಿ. ಆ ಬಗೆಯ ಸಂಧಾನಕ್ಕಾಗಿ ಹೆಗ್ಗಡೆಗಳನ್ನು, ಸುಂದರ ಹೆಂಗಸರನ್ನು ಕಳುಹಿಸಿದ ದಾಖಲೆ ಇದೆ. ಕೇಳದಿದ್ದರೆ ಬೆದರಿಕೆ ಹಾಕುವುದೂ ನಡೆದಿದೆ. ರಾಜನಿಗೆ ಯಾವ್ಯಾವುದು ಉಪಯೋಗಕ್ಕೆ ಬರುತ್ತದೋ, ಅನುಕೂಲಕರವಾಗಿ ಕಾಣುತ್ತದೋ ಅದೆಲ್ಲ ಅವನದೇ ಎಂಬ ಶೋಷಣೆಯ ತತ್ವ ಇದು. ಈ ಶೋಷಣೆಗೆ ನಾನಾ ಬಗೆಯ ಉಪಾಯಗಳೂ ಇವೆ. ಅದರಲ್ಲಿ ಆರಾಧನಾ ವಿಧಾನಗಳೂ ಸೇರಿಕೊಳ್ಳುತ್ತವೆ. ಕೇವಲ ನಂಬಿಕೆ, ಆಚರಣೆ, ಆರಾಧನೆಗಳೇ ಇತಿಹಾಸದಲ್ಲಿ ಅಸಂಖ್ಯಾತ ಸ್ತ್ರೀ ಪುರುಷರನ್ನು ಜೀವನ್ಮರಣ ಸಂಕಟಕ್ಕೆ ಸಿಲುಕಿಸಿವೆ.

● ಹಿಂದೆ ಹಳ್ಳಿಗಳಲ್ಲಿ 'ಗದುಗಿನ ಭಾರತ'ದ ಓದು ಜನ ಜೀವನದ ಒಂದು ಭಾಗವೇ ಆಗಿತ್ತು. ಶಿಕ್ಷಿತ, ಅಶಿಕ್ಷಿತ, ವರ್ಗ, ಜಾತಿ ಭೇದವಿಲ್ಲದ ಕಾವ್ಯದ ಓದು ವ್ಯಾಖ್ಯಾನಗಳಿಗೆ ತೆರೆದುಕೊಳ್ಳುತ್ತಿದ್ದರು. ಸಾಹಿತ್ಯ ಪ್ರೀತಿ, ಓದಿಗೆ ಇಂದು ಏನಾಗಿದೆ?

ಈ ಹೊತ್ತು ಸಾಹಿತ್ಯದ ಪರಿಕಲ್ಪನೆ ಬೇರೆಯಾಗಿದೆ. ವಿಶ್ವವಿದ್ಯಾಲಯದಲ್ಲಿರುವವರು ಏನನ್ನು ಹೇಳುತ್ತಾರೆ, ವಿಮರ್ಶೆ ಮಾಡುತ್ತಾರೆ ಅದೇ ಸಾಹಿತ್ಯದ ಪರಿಕ್ರಮ ಎನಿಸಿಬಿಟ್ಟಿದೆ. ಇನ್ನು ಸಾಹಿತ್ಯ ಬಲ್ಲವರೋ, ನಾಟಕಕಾರರೋ ಅದನ್ನೆಲ್ಲ ಹಳ್ಳಿಗಳ ಕಡೆ ಕೊಂಡೊಯ್ಯುತ್ತೇವೆ ಎನ್ನುತ್ತಾರೆ. ಹಾಗಾದರೆ ಗ್ರಾಮಗಳಲ್ಲಿ ಸಾಹಿತ್ಯ, ನಾಟಕ ಇನ್ನಿತರ ಕಲಾಪ್ರಕಾರಗಳು ಇರಲಿಲ್ಲವೆ? ನಾವು ಅವರಿಂದ ಕಲಿಯುವುದೋ ಅಥವಾ ನಾವು ಕಲಿತದ್ದನ್ನು ಅವರಿಗೆ ಹೇಳುವುದೋ ಯೋಚಿಸಬೇಕಾಗಿದೆ. ನಾನು ಚಿಕ್ಕವನಾಗಿದ್ದಾಗ ಅತ್ಯಂತ ಸಮರ್ಥವಾಗಿ ಗದುಗಿನ ಭಾರತ, ಜೈಮಿನಿ ಭಾರತ, ರಾಘವಾಂಕನ ಹರಿಶ್ಚಂದ್ರ ಕಾವ್ಯ ಅತ್ಯಂತ ಕಠಿಣವೆನಿಸುವ ರಾಜಶೇಖರ ವಿಳಾಸವನ್ನು ಓದುವವರಿದ್ದರು. ಬಿಳಿಗಿರಿರಂಗ ಶೆಟ್ಟಿ, ರಂಗಮಾದಶೆಟ್ಟಿ, ದುಂಡುಮಾದಯ್ಯ, ತಲಕಾಡು ಮಾಯಣ್ಣಗೌಡರು, ಚಿತ್ರದುರ್ಗದ ರಾಮಯ್ಯ, ಬುಡೇನ್‌ಸಾಬರು ಇನ್ನು ಕರ್ನಾಟಕದಾದ್ಯಂತ ಇರುವ ತತ್ವಪದಕಾರರು ಇವರೆಲ್ಲ ಎಲ್ಲಿ ವಿದ್ಯಾಭ್ಯಾಸ ಮಾಡಿದವರೋ ಆ ಓದಿನ ಬಗೆಯನ್ನು ಹೇಗೆ ಕಲಿತರೋ ಆಶ್ಚರ್ಯ. ಅಂಥದ್ದೂ ಒಂದು ತಲತಲಾಂತರದಿಂದ ಬಂದ ಸಾಂಪ್ರದಾಯಿಕ ಓದಿನ ಕ್ರಮ ಇತ್ತಲ್ಲ ಎಂದು ಆಶ್ಚರ್ಯ. ಅವರ ಓದು ಅವರ ಬದುಕಿನೊಂದಿಗೆ ಇದ್ದು ಅವು ನೈತಿಕ ಪಥ್ಯಗಳೂ ಆಗಿದ್ದವು. 'ಮಲೆಯ ಮಹದೇಶ್ವರ', 'ಮಂಟೇಸ್ವಾಮಿ', ಮಧ್ಯಕರ್ನಾಟಕದ 'ಜುಂಜಪ್ಪ' ಈ ಬಗೆಯ ಸಾಂಸ್ಕೃತಿಕ ವೀರರ ಕಥನಗಳೂ ಕೂಡ ಅದೇ ಬಗೆಯವು. ಜನಪದರು ರೂಪಕಗಳ ಮಾದರಿಯಲ್ಲೇ ತಮ್ಮ ಕಥನಗಳನ್ನು ಕಟ್ಟಿಕೊಂಡಿರುತ್ತಾರೆ. ಹಾಗಾಗಿ ಅವರಿಗೆ ನಾವು ಸಾಹಿತ್ಯ ಪ್ರೀತಿಯನ್ನು ಬೆಳೆಸಿಕೊಳ್ಳಿ, ನಾಟಕಗಳನ್ನು ಆಡಿ ಅನ್ನುವುದರ ಬದಲು ಅವರ ಕಥನ, ನಾಟಕ, ಬದುಕಿನ ಕ್ರಮ, ಚರಿತ್ರೆಯನ್ನು ನಾವೂ ಒಮ್ಮೆ ಕಣ್ಣು, ಮನಸ್ಸು ತಿರುಗಿಸಿ ನೋಡಬಹುದಲ್ಲ ಎಂಬುದು ನನ್ನ ತಿಳಿವಳಿಕೆ. ನನ್ನ ಪ್ರಾಥಮಿಕ ಶಾಲೆಯ ಮೇಷ್ಟ್ರು ಬಿಳಿಗಿರಿರಂಗ ಶೆಟ್ಟರಿಗೆ ಹಳಗನ್ನಡ ಅದೆಷ್ಟು ಲೀಲಾಜಾಲವಾಗಿ ಬರುತ್ತಿತ್ತೋ, ಕಾಳಿದಾಸನ 'ರಘುವಂಶ', 'ಕುಮಾರಸಂಭವ', 'ಅಭಿಜ್ಞಾನ ಶಾಕುಂತಲ', 'ಮಾಳವಿಕಾಗ್ನಿಮಿತ್ರ' ಇವೇ